ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಪತ್ರವನ್ನು ಬರೆದಿರುತ್ತಾರೆ.

10. ವರಾಹಿ ಜಲ ವಿದ್ಯುತ್ ಯೋಜನೆಯಲ್ಲಿ 2 * 115 ಮೆ.ವ್ಯಾ. ಸಾಮರ್ಥ್ಯದ 3 ಮತ್ತು 4ನೇ ಘಟಕಗಳನ್ನು ಡಿಸೆಂಬರ್ 2008ರ ಅಂತ್ಯದೊಳಗೆ ಚಾಲನೆಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
11. ಪ್ರಸಕ್ತ ವರ್ಷ ಪವನ ವಿದ್ಯುತ್ ಯೋಜನೆಗಳಿಂದ 100 ಮೆ.ವ್ಯಾ. ವಿದ್ಯುತ್ ರಾಜ್ಯಕ್ಕೆ ದೊರೆಯಲಿದೆ.

ಧೀರ್ಘ ಕಾಲಿಕ ಕ್ರಮಗಳು :

1. ರಾಯಚೂರು ಶಾಖೋತ್ಪಾನ್ನ 8ನೇ ವಿದ್ಯುತ್ ಉತ್ಪಾದನಾ ಘಟಕವು ಅಕ್ಟೋಬರ್ 2009 ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.
2. ಬಳ್ಳಾರಿಯಲ್ಲಿ 500 ಮೆ.ವ್ಯಾ. ಶಾಖೋತ್ಪನ್ನ 2ನೇ ವಿದ್ಯುತ್ ಉತ್ಪಾದನಾ ಘಟಕವು ಮಾರ್ಚ್ 2010ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇದೆ.
3. ತಲಾ 1000 ರಿಂದ 1320 ಮೆ.ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ ಬೆಳಗಾವಿ ಜಿಲ್ಲೆಯ ಘಟಪ್ರಭಾ ದಲ್ಲಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಖಾಸಗಿ ವಿದ್ಯುತ್ ಉತ್ಪಾದಕರಿಂದ ಸ್ಥಾಪಿಸಲು ಪವರ್ ಕಂಪನಿ ಆಫ್ ಕರ್ನಾಟಕ ಲಿ. ಸ್ಪರ್ಧಾತ್ಮಕ ಬಿಡ್ಡು ಪ್ರಕ್ರಿಯೆಯನ್ನು ಆರಂಭಿಸಿರುತ್ತದೆ.
4. ಧೀರ್ಘಕಾಲಿಕ ಕ್ರಮವಾಗಿ 2500 ಮೆ.ವ್ಯಾಟ್ ವಿದ್ಯುತ್ತನ್ನು ಟ್ಯಾರಿಫ್ ಆಧಾರಿತ ಸ್ಪರ್ಧಾತ್ಮಕ ಬಿಡ್ಡು ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.
5. ತಾಲ್ಲೂಕು ಮಟ್ಟದಲ್ಲಿ 5 ಮೆ.ವ್ಯಾಟ್ ಮತ್ತು ಅದರ ಭಾಗ ಸಾಮರ್ಥ್ಯದ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಬಿಡ್ಡುಗಳನ್ನು ಕರೆಯಲಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (495)314
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ, ಕೆ.ಎಂ. (ಕಡೂರು)
ಉತ್ತರಿಸುವ ಸಚಿವರ ಹೆಸರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ) ರಾಜ್ಯದಲ್ಲಿ ಅಲೆಮಾರಿ ಜನಾಂಗದವರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಈ ಜನಾಂಗದವರ ವಸತಿರಹಿತರ ಕುಟುಂಬ ಸಮೀಕ್ಷೆ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ನಿವೇಶನರಹಿತರ ಮತ್ತು ವಸತಿರಹಿತರ ಇಲ್ಲದಿದ್ದಲ್ಲಿ ಸರ್ಕಾರದ ಕ್ರಮವೇನು (ತಾಲ್ಲೂಕುವಾರು ಕುಟುಂಬ ಮಾಹಿತಿ ನೀಡುವುದು);

ಈ ಜನಾಂಗದವರಿಗಾಗಿ ಪ್ರತ್ಯೇಕವಾಗಿ ರಾಜ್ಯಾದ್ಯಂತ ಕುಟುಂಬ ಸಮೀಕ್ಷೆ ನಡೆಸಲಾಗಿಲ್ಲ. ಮುಂದಿನ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 2005–06, 2006–07 ಮತ್ತು 2007–08 ಸಾಲಿನಲ್ಲಿ ಅಲೆಮಾರಿ ಜನಾಂಗದವರಿಗೆ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು);

2005–06, 2006–07 ಸಾಲಿಗೆ ಅಲೆಮಾರಿ ಜನಾಂಗಕ್ಕೆ ಪ್ರತ್ಯೇಕವಾಗಿ ಗುರಿ ನಿಗದಿಪಡಿಸಿರುವುದಿಲ್ಲ.

ಆದರೆ ಸರ್ಕಾರದ ಸುತ್ತೋಲೆ ಸಂ. ವಇ/166/ಹೆಚ್ಎಎಂ/2007 ದಿನಾಂಕ–07.08.2007 ರಲ್ಲಿ ಈ ಜನಾಂಗವನ್ನು ವಿಶೇಷ ವರ್ಗವೆಂದು ಪರಿಗಣಿಸಿದ ನಂತರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2007–08ನೇ ಸಾಲಿಗೆ ರೂ.100.00 ಲಕ್ಷಗಳನ್ನು ಬಿಡುಗಡೆಗೊಳಿಸಿ, ರಾಜ್ಯಕ್ಕೆ 333 ಮನೆಗಳನ್ನು ಮಂಜೂರು ಮಾಡಿದೆ.

ಈ) ಈ ಮೂರು ವರ್ಷಗಳಲ್ಲಿ ಅಲೆಮಾರಿ ಜನಾಂಗದವರಿಂದ ಮನೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು, ಕುಟುಂಬಗಳವಾರು ಮಾಹಿತಿ ನೀಡುವುದು);

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಈವರೆಗೆ ಒಟ್ಟು 902 ಅರ್ಜಿಗಳು ಬಂದಿದ್ದು ತಾಲ್ಲೂಕುವಾರು, ಕುಟುಂಬವಾರು ವಿವರ ಈ ಕೆಳಗಿನಂತಿರುತ್ತದೆ:

ಜಿಲ್ಲೆ	ತಾಲ್ಲೂಕು	ಕುಟುಂಬಗಳ ಸಂಖ್ಯೆ
ದಾವಣಗೆರೆ	ದಾವಣಗೆರೆ	53
ಚಿತ್ರದುರ್ಗ	ಹೊಳಲ್ಕೆರೆ	129
	ಹಿರಿಯೂರು	46
	ಚಳ್ಳಕೆರೆ	66
	ಹೊಸದುರ್ಗ	18
ಚಿಕ್ಕಬಳ್ಳಾಪುರ	ಬಾಗೇಪಲ್ಲಿ	51
	ಚಿಂತಾಮಣಿ	37
ಕೋಲಾರ	ಬಂಗಾರಪೇಟೆ	40

ಬೆಂಗಳೂರು ಗ್ರಾಮಾಂತರ	ಹೊಸಕೋಟೆ	79
ಗುಲ್ಬರ್ಗಾ	ಗುಲ್ಬರ್ಗಾ	50
ಮಂಡ್ಯ	ಶ್ರೀರಂಗಪಟ್ಟಣ	25
ತುಮಕೂರು	ಶಿರಾ	56
ಕೋಲಾರ	ಕೋಲಾರ	14
ರಾಯಚೂರು	ರಾಯಚೂರು	24
	ಮಾನ್ವಿ	30
	ದೇವದುರ್ಗ	12
	ಲಿಂಗಸೂಗೂರು	12
ಹಾವೇರಿ	ಹಾನಗಲ್	55
ಬಿಜಾಪುರ	ಮುದ್ದೇಬಿಹಾಳ	35
ಬಳ್ಳಾರಿ	ಬಳ್ಳಾರಿ	44
ತುಮಕೂರು	ಮಧುಗಿರಿ	26
ಒಟ್ಟು		**902**

ಉ) ಆಶ್ರಯ/ಇಂದಿರಾ ನಿವಾಸ್ ಯೋಜನೆಯಡಿಯಲ್ಲಿ ಉಚಿತವಾಗಿ/ಸಹಾಯಧನ ರೂಪದಲ್ಲಿ ಮನೆಗಳನ್ನು ಮಂಜೂರು ಮಾಡುತ್ತಿರುವುದು ನಿಜವೇ;

ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ನೀಡಲಾಗುವ ಎಲ್ಲಾ ಘಟಕ ವೆಚ್ಚವು ಸಂಪೂರ್ಣವಾಗಿ ಸಹಾಯಧನದ ರೂಪದಲ್ಲಿರುತ್ತದೆ.

ಆದರೆ ಆಶ್ರಯ ಯೋಜನೆಯಡಿ ನೀಡಲಾಗುವ ಘಟಕವೆಚ್ಚ ರೂ.30,000/–ಗಳಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗೆ ಸಂಪೂರ್ಣವಾಗಿ ಸಹಾಯಧನದ ರೂಪದಲ್ಲಿದ್ದು, ಸಾಮಾನ್ಯ ವರ್ಗಕ್ಕೆ ರೂ.15,000/– ಸಾಲ ಮತ್ತು ರೂ.15,000/–ಸಹಾಯಧನವಾಗಿರುತ್ತದೆ.

ನಗರ ಆಶ್ರಯ ಯೋಜನೆಯಡಿ ನೀಡಲಾಗುವ ಘಟಕ ವೆಚ್ಚವು ರೂ.25,000/–ಗಳಾಗಿದ್ದು, ಎಲ್ಲಾ ವರ್ಗಕ್ಕೂ ಸಾಲದ ರೂಪದಲ್ಲಿರುತ್ತದೆ.

ಊ) ಹಾಗಿದ್ದಲ್ಲಿ, ಹಿಂದುಳಿದ ವರ್ಗದ ಅಲೆಮಾರಿ ಜನಾಂಗದವರಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗುವುದೇ; ಈ ಬಗ್ಗೆ ಸರ್ಕಾರದ ನಿಲುವೇನು;

2007–08ನೇ ಸಾಲಿನ ನಿಗದಿಪಡಿಸಿದ ಈ ಅಲೆಮಾರಿ ಜನಾಂಗಕ್ಕೆ ನೀಡಲಾಗುವ ಘಟಕವೆಚ್ಚ ರೂ.30,000/–ವನ್ನು ಸಂಪೂರ್ಣವಾಗಿ ಸಹಾಯಧನದ ರೂಪದಲ್ಲಿ ನೀಡಲಾಗುತ್ತಿದೆ.

ಋ) 2008–09ನೇ ಸಾಲಿನಿಂದ ಅಲೆಮಾರಿ ಜನಾಂಗದ ವಿಶೇಷ ವಸತಿ ಯೋಜನೆಯನ್ನು ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುವುದೇ;

ಇಲ್ಲ.

ಋೂ) ಹಾಗಿದ್ದಲ್ಲಿ, ಆಗಸ್ಟ್ 15, 2008ನೇ ಸಾಲಿನಿಂದ ಸರ್ಕಾರ ಅನುಷ್ಠಾನಗೊಳಿಸುವುದೇ?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (428)304
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ. (ಶಿರಾ)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ತುಮಕೂರು ಜಿಲ್ಲೆ, ಶಿರಾ ಪಟ್ಟಣದಲ್ಲಿ 220 ಕೆ.ವಿ. ವಿದ್ಯುತ್ ಸ್ಥಾವರ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಕೈಗಾರಿಕಾಭಿವೃದ್ಧಿಯತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯುತ್ ಸ್ಥಾವರಕ್ಕೆ ಸೂಕ್ತ ಜಾಗ ಗುರುತಿಸಲಾಗಿದೆಯೇ;

ಹೌದು, ತುಮಕೂರು ಜಿಲ್ಲೆ ಶಿರಾ ಪಟ್ಟಣದಲ್ಲಿ 220 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಪ್ರಾರಂಭಿಕ ಹಂತದಲ್ಲಿದ್ದು, ಈ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ. ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ದೊರೆತ ನಂತರ ಸದರಿ 220 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆಗೆ ಅವಶ್ಯವಿರುವ ಸ್ಥಳವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಗ್ರಾಮಗಳಲ್ಲಿ ಹಾಗೂ ಹೊಸ ಬೀದಿಗಳಿಗೆ ಹೆಚ್ಚುವರಿ ದೀಪ ಇಲ್ಲದೇ ರೈತರು ಮತ್ತು ನಾಗರೀಕರು ಕತ್ತಲಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಂತಹ ಪ್ರಕರಣಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಹಾಗೂ ಸ್ಥಳೀಯ ಸಂಸ್ಥೆಗಳಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ದೀಪದ ಕೋರಿಕೆ ಬಂದ ಕೂಡಲೇ ವಿದ್ಯುತ್ ಸರಬರಾಜು ಕಂಪನಿಗಳು ನಿಯಮಾವಳಿಗಳನ್ನು ಅನುಸರಿಸಿ ವಿದ್ಯುತ್ ಸಂಪರ್ಕ ಒದಗಿಸುತ್ತವೆ.

ಇ) ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ;

ಸರ್ಕಾರದ ಮುಂದೆ ಯಾವುದೇ ವಿಶೇಷ ಯೋಜನೆಯ ಪ್ರಸ್ತಾಪ ಇರುವುದಿಲ್ಲ.